**<u>ನೇಮಕಾತಿ–2021</u>**

**<u>ಅಧಿಸೂಚನೆ ಸಂಖ್ಯೆ: 12/ನೇಮಕಾತಿ–2/2021–22</u>**

# ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಮತ್ತು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಗಳಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದದ ವೈಜ್ಞಾನಿಕ ಅಧಿಕಾರಿ (ಪುರುಷ ಮತ್ತು ಮಹಿಳಾ) ಹುದ್ದೆಗಳ ನೇಮಕಾತಿ ಹುದ್ದೆಗೆ ಅರ್ಜಿ – 2021

**ಒಟ್ಟು ಹುದ್ದೆಗಳು:84**

ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಮತ್ತು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಗಳಲ್ಲಿ ಖಾಲಿ ಇರುವ ವೈಜ್ಞಾನಿಕ ಅಧಿಕಾರಿಗಳು (ಪುರುಷ ಮತ್ತು ಮಹಿಳಾ) ಹುದ್ದೆಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆಗಳು.

- ಅರ್ಜಿಗಳನ್ನು ಆನ್–ಲೈನ್ (On-line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.

- ಅರ್ಜಿದಾರರು ಅಧಿಸೂಚನೆಯಲ್ಲಿ ನೀಡಲಾಗಿರುವ ಮೀಸಲಾತಿ ವರ್ಗೀಕರಣವನ್ನು ನೋಡಿ ಅರ್ಜಿ ಸಲಿಸುವಂತೆ ಸೂಚಿಸಲಾಗಿದೆ.

- ಆನ್–ಲೈನ್ (On-line) ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ವಿಧಾನ :

  ಅರ್ಜಿದಾರ ಇಲಾಖೆಯ ಅಧಿಕೃತ ವೆಬ್‌ಸೈಟ್ ಟಿ www.ksp.gov.in ನಲ್ಲಿ current recruitment ನ ಮೇಲೆ ಕ್ಲಿಕ್ ಮಾಡಿ ನಂತರ POLICE RECRUITMENT–2021 ಕ್ಲಿಕ್ ಮಾಡಿ ಅಥವಾ http://fsl21.ksp-online.in ಕ್ಲಿಕ್ ಮಾಡಿ ಮೊದಲಿಗೆ ಭರ್ತಿ ಮಾಡುವ ಮುನ್ನ ಮಾಹಿತಿಸೂಚಿ/ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡು ಭರ್ತಿಮಾಡಬೇಕು. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅರ್ಜಿದಾರ ಒಂದು ಬಿಳಿ ಹಾಳೆಯ ಮೇಲೆ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರ, ಸಹಿ, ಎಡಗೈ ಹೆಬ್ಬೆಟ್ಟಿನ ಗುರುತು ಮತ್ತು ಅಧಿಸೂಚನೆಯ ಕ್ರಮ ಸಂಖ್ಯೆ 8 (ಬಿ) ರಲ್ಲಿ ನಮೂದಿಸಲಾಗಿರುವ ಯಾವುದಾದರು ಗುರುತಿನ ಚೀಟಿಯನ್ನು ಪ್ರತ್ಯೇಕವಾಗಿ (Soft Copy - less than 2MB) ಸ್ಕ್ಯಾನ್ ಮಾಡಿಟ್ಟು ಕೊಂಡಿರಬೇಕು. ನಂತರ ಅರ್ಜಿದಾರನ ಹೆಸರು, ಜಾತಿ, ಮೀಸಲಾತಿಗಳ ವಿವರ, ಹುಟ್ಟಿದ ದಿನಾಂಕ ಮತ್ತು ಇತ್ಯಾದಿ ವಿವರಗಳನ್ನು ಭರ್ತಿಮಾಡಿ ಜಾತಿ ಪ್ರಮಾಣಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಗ್ರಾಮೀಣ, ಪಿಡಿಪಿ, ಕನ್ನಡ ಮಾಧ್ಯಮ, ಅಂಗವಿಕಲ,

ಮಾಜಿ ಸೈನಿಕ, ಎಂ.ಎಸ್.ಸಿ ಅಥವಾ ಎಂ.ಟೆಕ್ ಅಥವಾ ತತ್ಸಮಾನ ವಿದ್ಯಾರ್ಹತೆ, ಸಂಶೋಧನ ಅನುಭವ ಮತ್ತು ಕಲ್ಯಾಣ ಕರ್ನಾಟಕ ಪ್ರಮಾಣಪತ್ರ ಹಾಗೂ ಎನ್.ಓಸಿ ಯ ಪ್ರಮಾಣಪತ್ರಗಳನ್ನು ಭರ್ತಿ ಮಾಡುವಾಗ ಕಂಪ್ಯೂಟರ್ ಮುಖೇನ ಅಫ್‌ಲೋಡ್ ಮಾಡುವುದು ಹಾಗೂ ಕೊನೆಯದಾಗಿ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ ಸಹಿ ಮತ್ತು ಎಡಗೈ ಹೆಬ್ಬೆಟ್ಟಿನ ಗುರುತು ಹಾಗೂ ಗುರುತಿನ ಚೀಟಿಯನ್ನು ಕಂಪ್ಯೂಟರ್ ಮುಖೇನ ಅಪ್‌ಲೋಡ್ (Upload) ಮಾಡುವುದು. ಇಲ್ಲವಾದಲ್ಲಿ ಅಂತಹ ಅರ್ಜಿದಾರರು ಆನ್‌ಲೈನ್‌ನಲ್ಲಿ ಅರ್ಜಿಯನ್ನು ತುಂಬಿ ಮುಂದುವರೆಯಲು ಸಾಧ್ಯವಾಗುವುದಿಲ್ಲ. ಅರ್ಜಿದಾರ ನೀಡಿರುವ ವಿವರಗಳು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿದ್ದಲ್ಲಿ ಮಾತ್ರ ಚಲನ್ ಮುದ್ರಿಸಬಹುದು. ಚಲನ್ ಮುದ್ರಿಸಲು ಜನರೇಟ್ ಚಲನ್ ಬಟನ್ ಮೇಲೆ ಕ್ಲಿಕ್ ಮಾಡಿ ತ್ರಿಪತಿ (Triplicate) ಬ್ಯಾಂಕ್ ಚಲನ್ ಸೃಜನೆಯಾಗುತ್ತದೆ. ಆ ಚಲನ್‌ನಲ್ಲಿ ಅರ್ಜಿಯ ಸಂಖ್ಯೆಯೊಂದಿಗೆ, ಆಯ್ಕೆ ಮಾಡಿರುವ ಹುದ್ದೆ, ನಿಮ್ಮ ಭಾವಚಿತ್ರ, ಪ್ರವರ್ಗ, ಮೀಸಲಾತಿಗಳ ವಿವರ ಕೆ–ಕೆ ಪ್ರದೇಶದ ಮೀಸಲಾತಿ ಮಾಹಿತಿ, ಹುದ್ದೆಯ ವಿಭಾಗಗಳ ಅಧ್ಯತೆಯ ಕ್ರಮ ಮತ್ತು ಪಾವತಿಸಬೇಕಾಗಿರುವ ನಿಗದಿತ ಶುಲ್ಕಗಳ ವಿವರಗಳು ಇರುತ್ತದೆ. ಆ ಚಲನ್ ಪ್ರತಿಯನ್ನು ಮುದ್ರಿಸಿ/ಪ್ರಿಂಟ್ ಮಾಡಿಕೊಳ್ಳತಕ್ಕದ್ದು.

- ನಂತರ ಅರ್ಜಿದಾರ ಮುದ್ರಿಸಿಕೊಳ್ಳಲಾದ ಚಲನ್‌ನಲ್ಲಿ ನಮೂದಾಗಿರುವ ಒಟ್ಟು ಪರೀಕ್ಷಾ ಶುಲ್ಕವನ್ನು ನಗದು ರೂಪದಲ್ಲಿಯೇ ಅಧಿಕೃತ ಹೆಚ್.ಡಿ.ಎಫ್.ಸಿ ಶಾಖೆಗಳಲ್ಲಿ ಅಥವಾ ಅಂಚೆ ಕಛೇರಿಯಲ್ಲಿ ಪಾವತಿಸಬೇಕಾಗಿರುತ್ತದೆ ಹಾಗೂ ಆನ್‌ಲೈನ್ ಮುಖಾಂತರ ಸಹ ಶುಲ್ಕವನ್ನು ಪಾವತಿಸಬಹುದಾಗಿದೆ. ನಂತರ ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ಶುಲ್ಕ ಪಾವತಿಸಿದ ಚಲನ್‌ನ 'ಅಭ್ಯರ್ಥಿ ಪ್ರತಿ'ಯನ್ನು ಇಟ್ಟುಕೊಂಡಿರತಕ್ಕದು.

- ಅಭ್ಯರ್ಥಿಯ ಶುಲ್ಕ ಪಾವತಿಸಿದ ಮರುದಿನ ಪುನಃ ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನಲ್ಲಿ My Application ನ್ನು ಕ್ಲಿಕ್ ಮಾಡಿ, ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸಿದ ನಂತರವೇ ಅರ್ಜಿ ತೆರೆಯುತ್ತದೆ ಹಾಗೂ ಅಭ್ಯರ್ಥಿಯು ಭರ್ತಿ ಮಾಡಿರುವ ಎಲ್ಲಾ ವಿವರಗಳನ್ನು ಒಳಗೊಂಡಂತೆ ಅರ್ಜಿಯು ಸೃಜನೆಯಾಗುತ್ತದೆ, ಭರ್ತಿ ಮಾಡಿದ ಆನ್–ಲೈನ್ ಅರ್ಜಿಯ ಪ್ರತಿಯನ್ನು ಪ್ರಿಂಟ್ ಮಾಡಿಟ್ಟುಕೊಳ್ಳತಕ್ಕದ್ದು. ಈ ಅರ್ಜಿ ಸಂಖ್ಯೆಯು ಮುಂದಿನ ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಿಗೆ ಅವಶ್ಯಕವಾಗಿರುತ್ತದೆ.

- ಆನ್–ಲೈನ್ ಮುಖಾಂತರ ದಿನಾಂಕ: 07.06.2021 ರಂದು ಬೆಳಗ್ಗೆ 10–00 ಗಂಟೆಯಿಂದ ದಿನಾಂಕ: 07.07.2021 ರ ಸಂಜೆ 06.00 ಗಂಟೆಯವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಪರೀಕ್ಷಾ ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸಲು ದಿನಾಂಕ: 09.07.2021 ರಂದು ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮುಖಾಂತರ ಅಥವಾ ಬ್ಯಾಂಕ್ ಅಥವಾ ಅಂಚೆ ಕಛೇರಿಯ ವೇಳೆಯಲ್ಲಿ ಮಾತ್ರ ಪಾವತಿಸತಕ್ಕದ್ದು. ಮರುದಿನ ಇಂಟರ್‌ನೆಟ್‌ನಲ್ಲಿ ಅಂಚೆ ಕಛೇರಿಯ ವೆಬ್‌ಸೈಟ್‌ನಲ್ಲ ಹಣ ಸಂದಾಯವಾದ ಬಗ್ಗೆ ಖಚಿತ ಪಡಿಸಕೊಳ್ಳಬಹುದು. ಒಂದು ವೇಳೆ ಶುಲ್ಕ ಜಮಾವಾಗದಿದ್ದಲ್ಲಿ ಶುಲ್ಕ ಪಾವತಿಸಿದ ಬ್ಯಾಂಕ್‌ನ್ನು ಸಂಪರ್ಕಿಸತಕ್ಕದ್ದು.

- ನೇಮಕಾತಿಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನ "MY APPLICATION" ಮುಖಾಂತರ ಪಡೆದುಕೊಳ್ಳಲು ಸೂಚಿಸಲಾಗಿದೆ. ಉದಾಹರಣೆ: ಅರ್ಜಿ ಯಶಸ್ವಿಯಾಗಿರುವ ಕುರಿತು, ಲಿಖಿತ ಪರೀಕ್ಷೆಯ ದಿನಾಂಕ, ಕರೆಪತ್ರಗಳು/ ಅರ್ಹತಾ ಪಟ್ಟಿ, ಪರೀಕ್ಷೆಯ ದಿನಾಂಕ, ಕರೆಪತ್ರ/ವೈದ್ಯಕೀಯ ಪರೀಕ್ಷೆಯ ದಿನಾಂಕ, ಕರೆಪತ್ರಗಳು ಇತ್ಯಾದಿ,

- ಅರ್ಜಿದಾರನು ಆನ್‌ಲೈನ್‌ನಲ್ಲಿ ಅರ್ಜಿಯನ್ನು ತುಂಬಲು ಗಣಕಯಂತ್ರದಲ್ಲಿ ಅಂತರ್ಜಾಲದ ಸಂಪರ್ಕ (SOFTWARE , Internet Explorer 8 or 9, or Google Chroma or Firefox) ಅಳವಡಿಸಿಕೊಂಡಿರಬೇಕು.

- ಅರ್ಜಿಯ ಚಲನ್ ಮತ್ತು ನೋಂದಾಯಿಸಿದ ಅರ್ಜಿಯ ಪ್ರತಿಯನ್ನು ಗಣಕಯಂತ್ರದಲ್ಲಿ ಪಡೆಯಲು PDF Software ಆಳವಡಿಸಿಕೊಂಡಿರಬೇಕು.

- ಗಣಕಯಂತ್ರದ ಪರದೆಯ ಮೇಲೆ ಚಿತ್ತರಿಸಿರುವ ಕನ್ನಡದ ಅಕ್ಷರಗಳು ನುಡಿ ತಂತ್ರಾಂಶವನ್ನು ಬಳಸಿ ಬರೆಯಲಾಗಿದೆ, ಕನ್ನಡ ಅಕ್ಷರಗಳು ಗಣಕಯಂತ್ರದ JUNK CHARACTER ರೂಪದಲ್ಲಿ ಗಣಕಯಂತ್ರದ ಪರದೆಯ ಮೇಲೆ ಮೂಡಿದರೆ, ಅದನ್ನು ಸರಿಪಡಿಸಲು ಗಣಕಯಂತ್ರದಲ್ಲಿ NUDI SOFTWARE ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

- ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ನಂತರ ನಿಗದಿತ ಶುಲ್ಕ ಪಾವತಿಸಲು ಸೃಜನೆಯಾಗುವ ಬ್ಯಾಂಕ್ ಚಲನ್ ಮತ್ತು ಪೂರ್ಣಗೊಳಿಸಿದ ಅರ್ಜಿಯನ್ನು ಗಣಕಯಂತ್ರದ ಪರದೆಯ ಮೇಲೆ ಚಿತ್ತರಿಸಲು ಗಣಕಯಂತ್ರದಲ್ಲಿ PDF Reader Software ಅಳವಡಿಸಿರಬೇಕು.

- ಅರ್ಜಿ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ:

  1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 07/06/2021, ಬೆಳಗ್ಗೆ 10:00 ಗಂಟೆಯಿಂದ.

  2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 07/07/2021, ಸಂಜೆ 06:00 ಗಂಟೆವರೆಗೆ.

  3. ಶುಲ್ಕವನ್ನು ಅಧಿಕೃತ ಬ್ಯಾಂಕ್ ಶಾಖೆಗಳ ಕಛೇರಿ ವೇಳೆಯಲ್ಲಿ ಪಾವತಿಸಲು ಕೊನೆಯ ದಿನಾಂಕ: 09/07/2021.

- ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸುವುದು.

- ಅರ್ಜಿ ಪೂರ್ಣಗೊಳಿಸಿದ ನಂತರ ಚಲನ್ ಮುಖಾಂತರ ಶುಲ್ಕವನ್ನು ಪಾವತಿಸುವಂತೆ ಸೂಚಿಸಲಾಗಿದೆ.

- ಶುಲ್ಕ ಪಾವತಿಸಿದ ಮರುದಿನ/ಎರಡು ದಿನದ ನಂತರ ಅರ್ಜಿಯ ಪ್ರತಿಯನ್ನು ಅಧಿಕೃತ ವೆಬ್‌ಸೈಟ್‌ನ ಮುಖಾಂತರ ಪಡೆಯಲು ಸೂಚಿಸಲಾಗಿದೆ.

- ಶುಲ್ಕವನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಲ್ಲಿ ಅಥವಾ ಅಂಚೆ ಕಛೇರಿಯಲ್ಲಿ ಅಧಿಕೃತ ಶಾಖೆಗಳಲ್ಲಿ ಪಾವತಿಸತಕ್ಕದ್ದು. ಹಾಗೂ ಇದನ್ನು ಹೊರತುಪಡಿಸಿ ಬೇರೆ ಯಾವುದೇ ಬ್ಯಾಂಕನಲ್ಲಿ ಮೂಲಗಳಿಂದ ಹಣ ಪಾವತಿಸತಕ್ಕದ್ದಲ್ಲ. ನಿಗದಿತ ದಿನಾಂಕದ ನಂತರ ಶುಲ್ಕವನ್ನು ಪಾವತಿಸಿದ ಅರ್ಜಿದಾರರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ಅಥವಾ ಬೇರೆ ಸಮಸ್ಯೆ ಎದುರಾದಲ್ಲಿ ನೇಮಕಾತಿ ಸಮಿತಿಯ ಸಹಾಯವಾಣಿ ಸಂಖ್ಯೆ: 080-2294-3346ಗೆ ಕರೆ ಮಾಡಿ ಅಗತ್ಯ ಮಾಹಿತಿಯನ್ನು ಪಡೆದು ಅರ್ಜಿಯನ್ನು ಸಲ್ಲಿಸಬಹುದು.

- ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಲಿ ಅಥವಾ ಅಂಚೆ ಕಛೇರಿಗಳಲ್ಲಿ ಅರ್ಜಿ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕ ಅಗತ್ಯ ಮಾಹಿತಿ ತುಂಬಿ ಶುಲ್ಕ ಪಾವತಿಸಲು ಬ್ಯಾಂಕ್ ಅಥವಾ ಅಂಚೆ ಕಛೇರಿಗಳ ಚಲನ್ ಅನ್ನು ಸೃಜಿಸಿ, ಆನ್‌ಲೈನ್‌ನಲ್ಲಿ ಡೌನ್ ಲೋಡ್ ಮಾಡಿದ ಚಲನ್ ಮೂಲಕ ಮಾತ್ರವೇ ಸ್ಟೇಟ್ ಬ್ಯಾಂಕ್ ಅಫ್ ಇಂಡಿಯ ಅಥವಾ ಅಂಚೆ ಕಛೇರಿಗಳಲ್ಲಿ ಶುಲ್ಕ ಪಾವತಿಸಬಹುದಾಗಿದೆ. ಬೇರ್‍ಯಾವುದೇ ಬ್ಯಾಂಕಿನಲ್ಲಿ ಹಣ ಪಾವತಿಸಲು ಅವಕಾಶವಿಲ್ಲ. ಬ್ಯಾಂಕ್ ಹುಂಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಅಥವಾ ಇನ್ಯಾವುದೇ ಸ್ವರೂಪದಲ್ಲಿ ಶುಲ್ಕ ಪಾವತಿಸತಕ್ಕದ್ದಲ್ಲ ಹಾಗೂ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

- ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಗಳಿಂದಲೂ ಹಿಂದಿರುಗಿಸಲಾಗುವುದಿಲ್ಲ.

- ಮೀಸಲಾತಿ ಕೋರುವ ಪ್ರಮಾಣ ಪತ್ರಗಳು ಅಧಿಸೂಚನೆಯಲ್ಲಿ ನಮೂದಿಸಿರುವಂತಹ ನಿಯಮಗಳ ನಮೂನೆಯಲ್ಲಿಯೇ ಇರಬೇಕು. ಸದರಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

- ಯಾವುದೇ ದಾಖಲೆಗಳನ್ನು ಅಂಚೆ ಮೂಲಕವಾಗಲಿ ಅಥವಾ ಮುದ್ದಾಂ ಆಗಿ ಸಲ್ಲಿಸತಕ್ಕದ್ದಲ್ಲ.

- ಮೀಸಲಾತಿಯನ್ನು ಕೋರ ಬಯಸುವ ಅರ್ಜಿದಾರರುಗಳು ಆನ್‌ಲೈನ್ ಅರ್ಜಿಯಲ್ಲಿ ಮೀಸಲಾತಿ ಸೌಲಭ್ಯಕ್ಕಾಗಿ ಇರುವ ಅಂಕಣವನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು. ಅಂಕಣವನ್ನು ಖಾಲಿ ಬಿಟ್ಟಿದ್ದಲ್ಲಿ ಸಾಮಾನ್ಯ ವರ್ಗ ಎಂದು ಪರಿಗಣಿಸಲಾಗುವುದು. ನಂತರ ಯಾವುದೇ ಹಂತದಲ್ಲಿ ಮೀಸಲಾತಿಯನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ. ಒಂದು ವೇಳೆ ತಪ್ಪಾಗಿ ನಮೂದಿಸಿದ್ದರೆ, ನಂತರ ತಿದ್ದುಪಡಿಗೆ ಅವಕಾಶವಿರುವುದಿಲ್ಲ ಮತ್ತು ಅಂತಹ ಅರ್ಜಿದಾರರುಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.

- ಆಯ್ಕೆಯಾಗಿರುವ ಎಲ್ಲಾ ಅರ್ಹ ಅಭ್ಯರ್ಥಿಗಳು ದಾಖಲೆ ಪರಿಶೀಲನೆ ಸಮಯದಲ್ಲಿ ಅನ್‌ಲೈನ್ ಮೂಲಕ ಸಲ್ಲಿಸಿದ¬ ಅರ್ಜಿಯ ಮುದ್ರಿತ ಪ್ರತಿಯನ್ನು ಹಾಗೂ ನಿಗದಿತ ಶುಲ್ಕವನ್ನು ಪಾವತಿಸಿರುವ ಚಲನ್‌ನ ಅಭ್ಯರ್ಥಿ ಮತ್ತು ನೇಮಕಾತಿ ಪ್ರತಿಯನ್ನು ಹಾಗೂ ಆನ್‌ಲೈನ್ ಮುಖಾಂತರ ಸಲ್ಲಿಸಿದ ಎಲ್ಲಾ ದಾಖಲೆ ಪತ್ರಗಳನ್ನು ತಪ್ಪದೇ ಹಾಜುರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ದಾಖಲೆ ಪರಿಶೀಲನೆಗೆ ಪರಿಗಣಿಸಲಾಗುವುದಿಲ್ಲ.

- ನಿಗದಿತ ಶುಲ್ಕವನ್ನು ಬ್ಯಾಂಕ್‌ನಲ್ಲಿ ಅಥವಾ ಅಂಚೆ ಕಛೇರಿಯಲ್ಲಿ ಪಾವತಿಸಿದ ನಂತರ, ಸಿಬ್ಬಂದಿಯವರು ಬ್ರಾಂಚ್‌ಕೋಡ್, ಜರ್ನಲ್ ಸಂಖ್ಯೆ, ಶುಲ್ಕ ಸಂದಾಯವಾದ ದಿನಾಂಕ ಮತ್ತು ಶುಲ್ಕ ಸ್ವೀಕರಿಸಿರುವವರ ಸಹಿಯೊಂದಿಗೆ ಮಾಹಿತಿಯನ್ನು ಸರಿಯಾಗಿ ನಮೂದಿಸಿರುವರೆಂದು ಅರ್ಜಿದಾರರು ಖಾತ್ರಿ ಪಡಿಸಿಕೊಳ್ಳಲು ಸೂಚಿಸಲಾಗಿದೆ. ಸದರಿ ಮಾಹಿತಿಯ ಅಂಚೆ ಕಛೇರಿಯ ಚಲನ್‌ಗೂ ಅನ್ವಯವಾಗುತ್ತದೆ

**ಅರ್ಜಿ ಸಲ್ಲಿಸಬಯಸುವ ಅರ್ಜಿದಾರರುಗಳು ಈ ಕೆಳಕಂಡ ಪ್ರಮಾಣ ಪತ್ರ, ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ (07/07/2021) ಸಿಂಧುವಾಗಿರುವಂತೆ ಪಡೆದಿಟ್ಟುಕೊಂಡಿರ ತಕ್ಕದ್ದು ಹಾಗೂ ಚಾಲ್ತಿಯಲ್ಲಿರಬೇಕು:**

ಎ) **ವೈಜ್ಞಾನಿಕ ಅಧಿಕಾರಿ, ಡಿಎನ್‌ಎ ವಿಭಾಗ:–** ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ಜೀವ ರಸಾಯನಶಾಸ್ತ್ರ/ಸೂಕ್ಷ್ಮ ಜೀವ ವಿಜ್ಞಾನ/ಜೀವ ವಿಜ್ಞಾನ/ವಿದಿ ವಿಜ್ಞಾನ/ಅಥವಾ ತತ್ಸಮಾನ ವಿದ್ಯಾರ್ಹತೆಯಾದ ಜೈವಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಹೊಂದಿರಬೇಕು.

Scientific Officer in D N A Section : Must be a holder of Master's Degree in Botany / Zoology / Bio-Chemistry / Microbiology / Life Sciences / Forensic Science or Equivalent qualification in Bio-science with atleast 55% agreegate marks.

Must have not less than two years research experience as a research scholar in any research institution recognized by the Government.

ಬಿ) **ವೈಜ್ಞಾನಿಕ ಅಧಿಕಾರಿ, ರಸಾಯನಶಾಸ್ತ್ರ ವಿಭಾಗ:–** ರಸಾಯನಶಾಸ್ತ್ರ / ಔಷಧಶಾಸ್ತ್ರ / ಜೀವರಸಾಯನಶಾಸ್ತ್ರ / ವಿಧಿವಿಜ್ಞಾನ / ತತ್ಸಮಾನ ವಿದ್ಯಾರ್ಹತೆಯಾದ ರಸಾಯನಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಹೊಂದಿರಬೇಕು.

Scientific Officer in Chemistry Section : Must be a holder of Master's Degree in Chemistry / pharmacology / Bio-Chemistry / Forensic Science / Equivalent qualification in Chemical secience with atleast 55% agreegate marks.

Must have not less than two years research experience as a research scholar in any research institution recognized by the Government.

ಸಿ) **<u>ವೈಜ್ಞಾನಿಕ ಅಧಿಕಾರಿ, ನಾರ್ಕೋಟಿಕ್ಸ್ ವಿಭಾಗ</u> :–** ರಸಾಯನಶಾಸ್ತ್ರ / ಔಷಧಶಾಸ್ತ್ರ / ಜೀವರಸಾಯನಶಾಸ್ತ್ರ / ವಿಧಿವಿಜ್ಞಾನ / ತತ್ಸಮಾನ ವಿದ್ಯಾರ್ಹತೆಯಾದ ರಸಾಯನಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಹೊಂದಿರಬೇಕು.

Scientific Officer in Narcotic Section : Must be a holder of Master's Degree in Chemistry / Pharmacology / Bio-Chemistry / Forensic Science / Equivalent qualification in Chemical secience with atleast 55% agreegate marks.

Must have not less than two years research experience as a research scholar in any research institution recognized by the Government.

ಡಿ) **<u>ವೈಜ್ಞಾನಿಕ ಅಧಿಕಾರಿ, ಭೌತಶಾಸ್ತ್ರ ವಿಭಾಗ</u>:–** ಭೌತಶಾಸ್ತ್ರ/ವಿಧಿವಿಜ್ಞಾನ/ತತ್ಸಮಾನ ವಿದ್ಯಾರ್ಹತೆಯಾದ ಭೌತ ವಿಜ್ಞಾನ ವಿಷಯದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಪಡೆದಿರಬೇಕು.

Scientific Officer in Physics Section : Must be a holder of Master's Degree in Physics / Forensic Science / Equivalent qualification in Physical sciences with atleast 55% agreegate marks.

Must have not less than two years research experience as a research scholar in any research institution recognized by the Government.

ಇ) **<u>ವೈಜ್ಞಾನಿಕ ಅಧಿಕಾರಿ, ಜೀವಶಾಸ್ತ್ರ ವಿಭಾಗ</u>:–** ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ / ಜೀವ ರಸಾಯನಶಾಸ್ತ್ರ/ಸೂಕ್ಷ್ಮ ಜೀವ ವಿಜ್ಞಾನ / ಜೀವವಿಜ್ಞಾನ / ವಿದಿವಿಜ್ಞಾನ / ಅಥವಾ ತತ್ಸಮಾನ ವಿದ್ಯಾರ್ಹತೆಯಾದ ಜೈವಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾಥಿಯಾಗಿ ಎರಡು ವರ್ಷಗಳಿಗ ಕಡಿಮೆಯಿಲ್ಲದಂತೆ ಸಂಶೋಧನೆಯಲ್ಲಿ ಅನುಭವ ಹೊಂದಿರಬೇಕು.

Scientific Officer in Biology Section : Must be a holder of Master's Degree in Botony / Zoology / Bio Chemistry / Microbiology/ Life Science / Forensic Science or Equivalent qualification in Bio science with at least 55% agreegate marks

Must have not less than two years research experience as a research scholar in any research institution recognized by the Government.

ಎಫ್) **ವೈಜ್ಞಾನಿಕ ಅಧಿಕಾರಿ, ಪ್ರಶ್ನಿತ ದಾಸ್ತಾವೇಜು ವಿಭಾಗ** :– ತತ್ಸಮಾನ ವಿದ್ಯಾರ್ಹತೆಯಾದ ರಸಾಯನಶಾಸ್ತ್ರ/ ವಿಧಿವಿಜ್ಞಾನ ವಿಷಯದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಅಥವಾ ಭೌತಶಾಸ್ತ್ರ ಮತ್ತು ತತ್ಸಮಾನ ವಿಷಯವಾದ ರಸಾಯನಶಾಸ್ತ್ರ/ಭೌತವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಹೊಂದಿರಬೇಕು.

Scientific Officer in Questioned Documents Section : Must be a holder of Master's Degree in Physics or Equivalent qualification in Physical Science / Chemistry or equivalent qualification in Chemical Science / Forensic Science / or equivalent / subjects with atleast 55% agreegate marks.

Must have not less than two years research experience as a research scholar in any research institution recognized by the Government.

ಜಿ) **ವೈಜ್ಞಾನಿಕ ಅಧಿಕಾರಿ, ಅಗ್ನಿಅಸ್ತ್ರ ವಿಭಾಗ:–** ಭೌತಶಾಸ್ತ್ರ/ವಿಧಿವಿಜ್ಞಾನ/ತತ್ಸಮಾನ ವಿದ್ಯಾರ್ಹತೆಯಾದ ಭೌತ ವಿಜ್ಞಾನ ವಿಷಯದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಹೊಂದಿರಬೇಕು.

Scientific Officer in Fire Arms Section : Must be a holder of Master's Degree in Physics / Forensic Science / Equivalent qualification in Physical sciences with atleast 55% agreegate marks.

Must have not less than two years research experience as a research scholar in any research institution recognized by the Government.

ಹೆಚ್) **<u>ವೈಜ್ಞಾನಿಕ ಅಧಿಕಾರಿ, ನ್ಯಾಯ ಮನೋವಿಜ್ಞಾನ ವಿಭಾಗ:</u>**– ಮನಶಾಸ್ತ್ರದಲ್ಲಿ ಎಂ.ಎಸ್.ಸಿ ಪದವಿಯನ್ನು ಪಡೆದಿರಬೇಕು, ಅಥವಾ ವಿಧಿವಿಜ್ಞಾನ ಮನಶಾಸ್ತ್ರ/ ವೈದ್ಯಕೀಯ ಮನ:ಶಾಸ್ತ್ರದಲ್ಲಿ ಕನಿಷ್ಠ ಶೇ.55 ಅಂಕಗಳೊಂದಿಗೆ ವಿಶೇಷ ಪರಿಣಿತಿಯೊಂದಿಗ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳು ಕಡಿಮೆಯಿಲ್ಲದಂತೆ ಸಂಶೋಧನಾ ಅನುಭವ ಹೊಂದಿರಬೇಕು.

Scientific Officer in Forensic Psychology Section : Must be a holder of M.Sc., Degree in Psychology or its equivalent qualification / subjects with specialization in Forensic Psychology / Clinical Psychology with atleast 55% aggregate marks.

Must have not less than two years research experience as a research scholar in any research institution recognized by the Government.

ಐ) **<u>ವೈಜ್ಞಾನಿಕ ಅಧಿಕಾರಿ, ಕಂಪ್ಯೂಟರ್ ಫೋರೆನ್ಸಿಕ್ ವಿಭಾಗ:</u>**– ಗಣಕ ವಿಜ್ಞಾನ / ವಿದ್ಯುನ್ಮಾನ / ಭೌತಶಾಸ್ತ್ರ / ವಿಧಿವಿಜ್ಞಾನ / ಮಾಹಿತಿ ವಿಜ್ಞಾನ / ತಂತ್ರಜ್ಞಾನ ವಿಷಯದಲ್ಲಿ ಅಥವಾ ಭೌತಿಕ ವಿಜ್ಞಾನ ತತ್ಸಮಾನ ವಿಷಯದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

**ಅಥವಾ**

ಗಣಕ ವಿಜ್ಞಾನ / ವಿದ್ಯುನ್ಮಾನ / ಮಾಹಿತಿ ವಿಜ್ಞಾನ ಅಥವಾ ತಂತ್ರಜ್ಞಾನ / ದೂರಸಂಪರ್ಕದಲ್ಲಿ ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ.ಟೆಕ್ ಪದವಿಯನ್ನು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಕನಿಷ್ಠ ಶೇ.55 ಪಡೆದಿರಬೇಕು

**ಜೊತೆಗೆ**

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾಥಿಯಾಗಿ ಎರಡು ವರ್ಷಗಳಿಗ ಕಡಿಮೆಯಿಲ್ಲದಂತೆ ಸಂಶೋಧನೆಯಲ್ಲಿ ಅನುಭವ ಹೊಂದಿರಬೇಕು.

Scientific Officer in Computer Forensic Section : 1) Must be a holder of Master's Degree in Computer science / Electronics / Physics / Forensic Science / Information Science or Technology / Equivalent qualification in Physical Science with atleast 55% agreegate marks

**Or**

M.Tech degree from any recognized university in Computer Science/ Electronics / Information Science or Technolodgy / Telecommunication / Equivalent qualification with at least 55% aggregate marks

**with**

Must have not less than two years research experience as a research scholar in any research institution recognized by the Government.

ಜೆ) <u>**ವೈಜ್ಞಾನಿಕ ಅಧಿಕಾರಿ, ಮೊಬೈಲ್ ಫೋರೆನ್ಸಿಕ್ ವಿಭಾಗ:–**</u> ಗಣಕ ವಿಜ್ಞಾನ / ವಿದ್ಯುನ್ಮಾನ /ಭೌತಶಾಸ್ತ್ರ / ವಿಧಿವಿಜ್ಞಾನ /ಮಾಹಿತಿ ವಿಜ್ಞಾನ/ ತಂತ್ರಜ್ಞಾನ ವಿಷಯದಲ್ಲಿ ಅಥವಾ ಭೌತಿಕ ವಿಜ್ಞಾನ ತತ್ಸಮಾನ ವಿಷಯದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಪಡೆದಿರಬೇಕು.

**ಅಥವಾ**

ಗಣಕ ವಿಜ್ಞಾನ / ವಿದ್ಯುನ್ಮಾನ / ಮಾಹಿತಿ ವಿಜ್ಞಾನ ಅಥವಾ ತಂತ್ರಜ್ಞಾನ / ದೂರಸಂಪರ್ಕದಲ್ಲಿ ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ.ಟೆಕ್ ಪದವಿಯನ್ನು ಪಡೆದಿರಬೇಕು / ಕನಿಷ್ಠ ಶೇ.55 ಅಂಕಗಳೊಂದಿಗೆ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರಬೇಕು.

**ಜೊತೆಗೆ**

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾಥಿಯಾಗಿ ಎರಡು ವರ್ಷಗಳಿಗ ಕಡಿಮೆಯಿಲ್ಲದಂತೆ ಸಂಶೋಧನೆಯಲ್ಲಿ ಅನುಭವ ಹೊಂದಿರಬೇಕು.

Scientific Officer in Mobile Forensics Section : Must be a holder of Master's Degree in Computer Science / Electronics / Physics / Forensic Science / Information Science or Technology / Equivalent qualification in Physical sciences with at least 55% aggregate marks.

**Or**

M.Tech degree from any recognized university in Computer Science / Electronics / Information Science or Technology / Telecommunication / Equivalent qualification with at least 55% aggregate marks.

**with**

Must have not less than two years research experience as a research scholar in any research institution recognized by the Government.

ಕೆ) <u>**ವೈಜ್ಞಾನಿಕ ಅಧಿಕಾರಿ, ಆಡಿಯೋ ವಿಡಿಯೋ ಫೋರೆನ್ಸಿಕ್ ವಿಭಾಗ:–**</u> ಗಣಕ ವಿಜ್ಞಾನ / ವಿದ್ಯುನ್ಮಾನ / ಭೌತಶಾಸ್ತ್ರ / ವಿಧಿವಿಜ್ಞಾನ / ಮಾಹಿತಿ ವಿಜ್ಞಾನ / ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು / ಭೌತಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

**ಅಥವಾ**

ಗಣಕ ವಿಜ್ಞಾನ/ವಿದ್ಯುನ್ಮಾನ/ಮಾಹಿತಿ ವಿಜ್ಞಾನ ಅಥವಾ ತಂತ್ರಜ್ಞಾನ/ದೂರಸಂಪರ್ಕದಲ್ಲಿ ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ.ಟೆಕ್ ಪದವಿಯನ್ನು ಪಡೆದಿರಬೇಕು/ಭೌತಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಅಂಕಗಳೊಂದಿಗೆ ತತ್ಸಮಾನ ವಿದ್ಯಾರ್ಹತೆ ಪಡೆಯಬೇಕು.

**ಜೊತೆಗೆ**

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳಿಗ ಕಡಿಮೆಯಿಲ್ಲದಂತೆ ಸಂಶೋಧನೆಯಲ್ಲಿ ಅನುಭವ ಹೊಂದಿರಬೇಕು.

Scientific Officer in Audio Video Forensics Section : Must be a holder of Master’s Degree in Computer Science / Electronic / Physics / Forensic Science / Information Science or Technology / Equivalent qualification in Physical sciences with atleast 55% agreegate marks.

**Or**

M.Tech degree from any recognized university in Computer Science/ Electronics / Information Science or Technolodgy / Telecommunication / Equivalent qualification with at least 55% aggregate marks.

**With**

Must have not less than two years research experience as a research scholar in any research institution recognized by the Government.

**ಎಲ್)** **<u>ವೈಜ್ಞಾನಿಕ ಅಧಿಕಾರಿ, ವಿಷವಿಜ್ಞಾನ ವಿಭಾಗ:</u>–** ರಸಾಯನಶಾಸ್ತ್ರ /ಔಷಧಶಾಸ್ತ್ರ / ಜೀವರಸಾಯನಶಾಸ್ತ್ರ / ವಿಧಿವಿಜ್ಞಾನ / ತತ್ಸಮಾನ ವಿದ್ಯಾರ್ಹತೆಯಾದ ರಸಾಯನಿಕ ವಿಜ್ಞಾನದಲ್ಲಿ ಕನಿಷ್ಠ ಶೇ.55 ಒಟ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಹೊಂದಿರಬೇಕು.

ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಎರಡು ವರ್ಷಗಳಿಗ ಕಡಿಮೆಯಿಲ್ಲದಂತೆ ಸಂಶೋಧನೆಯಲ್ಲಿ ಅನುಭವ ಹೊಂದಿರಬೇಕು.

Scientific Officer in Toxicology Section : Must be a holder of Master’s Degree in Chemistry / pharmacology / Bio-Chemistry / Forensic Science / Equivalent qualification in Chemical science with atleast 55% agreegate marks.

Must have not less than two years research experience as a research scholar in any research institution recognized by the Government.

ಎಂ) **ವೈಜ್ಞಾನಿಕ ಅಧಿಕಾರಿ, ಪೋಟೋಗ್ರಫಿ ವಿಭಾಗ:–**

(1) ವಿಜ್ಞಾನ ವಿಷಯದಲ್ಲಿ ಪದವಿ ಹೊಂದಿರಬೇಕು
(2) ಚಲನಚಿತ್ರಕಲೆ / ಛಾಯಾ ಚಿತ್ರಕಲೆಯಲ್ಲಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯು ನೀಡಿದ ತತ್ಸಮಾನ ವಿಷಯಗಳಲ್ಲಿ ಡಿಪ್ಲೋವೊ/ಪದವಿ ಹೊಂದಿರಬೇಕು.
(3) ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ ಛಾಯಾಚಿತ್ರ/ವಿಡಿಯೋಗ್ರಫಿ ಮತ್ತು ಅಡಿಯೋ–ವಿಡಿಯೋ ಉಪಕರಣಗಳ ನಿರ್ವಹಣೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಪ್ರಯೋಗಿಕ ತರಬೇತಿ ಅನುಭವ ಹೊಂದಿರಬೇಕು.

Must possess a Bachelor degree in Science.
Must be a Diplma/Degree holder in Cinematography or Photography or in their equivalent qualification subjects granted by an institution recognized by the Government.
Must have at least two years of practical experience in photography / videography and handling of Audio Video tools in any organization recognized by the Government.

- ಎಸ್.ಎಸ್.ಎಲ್.ಸಿ. : ವರ್ಗಾವಣೆ ಪತ್ರ (ಜನ್ಮ ದಿನಾಂಕದ ವಿವರದೊಂದಿಗೆ)
- ಸರ್ಕಾರಿ ಇಲಾಖೆಯಲ್ಲಿ (ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ)/ಸರ್ಕಾರದ ಯಾವುದೇ ಪ್ರಾಧಿಕಾರದಲ್ಲಿ /ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಕಂಪನಿಗಳಲ್ಲಿ ಪ್ರಸ್ತುತ ಉದ್ಯೋಗಿಯಾಗಿದ್ದಲ್ಲಿ ಅಂತಹವರು ಇಲಾಖಾ ವತಿಯಿಂದ ನೀಡಲಾಗುವ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ ಇಚ್ಛಾ ಅನುಮತಿ ಪತ್ರ/ ನಿರಾಪೇಕ್ಷಣ ಪ್ರಮಾಣಪತ್ರ.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿ ಕೋರುವ ಅರ್ಜಿದಾರರುಗಳು ತಹಶೀಲ್ದಾರ್‌ರಿಂದ ಪಡೆದ ನಮೂನೆ ಡಿ/ಇ/ಎಫ್ ಪ್ರಮಾಣ ಪತ್ರಗಳು.
- ಯೋಜನಾ ನಿರಾಶ್ರಿತ ಮೀಸಲಾತಿ ಕೋರುವ ಅರ್ಜಿದಾರರುಗಳು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರ.
- ಮಾಜಿ ಸೈನಿಕ ಮೀಸಲಾತಿ ಕೋರುವ ಮಾಜಿ ಸೈನಿಕ ಅರ್ಜಿದಾರರು ಸೈನ್ಯ ವಿಯೋಜನೆ ಪ್ರಮಾಣಪತ್ರ/ನಿರಾಪೇಕ್ಷಣಾ ಪ್ರಮಾಣಪತ್ರ (Discharge Certificate/NOC) ಮಾಜಿ ಸೈನಿಕರು ಸೇವೆ ಸಲ್ಲಿಸುವಾಗ ಹತರಾದ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ, ಕರ್ತವ್ಯ ನಿರ್ವಹಿಸುತ್ತಿದ್ದ ಕೇಂದ್ರ ಸಶಸ್ತ್ರದಳದ ಅಧಿಕಾರಿಗಳಿಂದ ಅವಲಂಬಿತ ಪ್ರಮಾಣಪತ್ರ ಮತ್ತು ಸೈನಿಕ ಬೋರ್ಡ್‌ನಿಂದ ಪಡೆದ ಪ್ರಮಾಣಪತ್ರ.

- ಗ್ರಾಮೀಣ ಮೀಸಲಾತಿ ಕೋರುವ ಅರ್ಜಿದಾರರುಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂದಪಟ್ಟ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರುವ ಪ್ರಮಾಣಪತ್ರ.
- ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅರ್ಜಿದಾರರುಗಳು 1ನೇ ತರಗತಿಯಿಂದ 10ನೇ ತರಗತಿಯ ವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂದಪಟ್ಟ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿಟ್ಟುಕೊಂಡಿರುವ ಪ್ರಮಾಣಪತ್ರ.
- ಮಾಹಿತಿ ಭರ್ತಿ ಮಾಡುವ ಮುನ್ನ ಬಿಳಿ ಹಾಳೆಯ ಮೇಲೆ ತಮ್ಮ ಇತ್ತೀಚಿನ ಭಾವಚಿತ್ರ, ಸಹಿ ಮತ್ತು ಗುರುತಿನ ಚೀಟಿಯನ್ನು ಪ್ರತ್ಯೇಕವಾಗಿ Scan ಮಾಡಿಕೊಂಡಿರತಕ್ಕದ್ದು.

ಭಾವಚಿತ್ರ (ಕಲರ್) : 400 X 400 pixel, size =< 2MB

ಸಹಿ ( ಕಪ್ಪು ಶಾಯಿ) : 400X 100 pixel, size =< 2MB

ಎಡಗೈ ಹೆಬ್ಬೆಟ್ಟಿನ ಗುರುತು: 400X 100 pixel, size =< 2MB

ಗುರುತಿನ ಚೀಟಿ : 400X 300 pixel, size =< 2MB gif, jpg, jpeg and png ಫಾರಮೆಟ್‌ನಲ್ಲಿರ ತಕ್ಕದ್ದು.

ಟಿಪ್ಪಣಿ:-ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮಾಡಿಸುವ/ಪಡೆಯುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಯಾವುದೇ ಹಂತದಲ್ಲಿ ಗಣನೆಗೆ ತೆಗೆದುಕೊಳ್ಳುವುದಿಲ್ಲ.

**ಪ್ರಮುಖವಾದ ಸೂಚನೆಗಳು:**

- ಅರ್ಹಗೊಂಡ ಅಭ್ಯರ್ಥಿಗಳಿಗೆ ಅಂಚೆ ಮುಖಾಂತರ ಕರೆಪತ್ರವನ್ನು ರವಾನಿಸಲಾಗುವುದಿಲ್ಲ. ವೆಬ್‌ಸೈಟ್ ಮುಖಾಂತರ ಪಡೆದುಕೊಳ್ಳಲು ಸೂಚಿಸಲಾಗಿದೆ.
- ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ ನಂತರ ಯಾವುದೇ ಹಂತದಲ್ಲೂ ಮಾಹಿತಿಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವಾಗ ವಿದ್ಯಾರ್ಹತೆಯ ಅಂಕಣದಲ್ಲಿ ಅಭ್ಯರ್ಥಿಗಳು ಗರಿಷ್ಠ ಅಂಕಗಳು ಮತ್ತು ಗಳಿಸಿದ ಅಂಕವನ್ನು ಪದವಿ ವಿದ್ಯಾರ್ಹತೆಯ ಅಂಕಪಟ್ಟಿಯಲ್ಲಿರುವಂತೆ ಅಂಕಗಳನ್ನು ಮಾತ್ರ ನಮೂದಿಸಬೇಕು.
- ಒಂದು ವೇಳೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ತಿದ್ದುಪಡಿ ಮಾಡುವ ಅಗತ್ಯತೆ ಕಂಡು ಬಂದಲ್ಲಿ ಹೊಸ ಅರ್ಜಿಯನ್ನು ಶುಲ್ಕ ಪಾವತಿಸಿ ಸಲ್ಲಿಸತಕ್ಕದ್ದು.
- ಆನ್‌ಲೈನ್ ಮೂಲಕ ಅರ್ಜಿಯಲ್ಲಿಸಲ್ಲಿಸಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಿಂದ ಯಾವುದೇ ಹಂತದಲ್ಲಿ ಅಭ್ಯರ್ಥಿಯು ನೀಡಿದ

ಮಾಹಿತಿಯು ಅಪೂರ್ಣ/ ಅಸ್ಪಷ್ಟ / ತಪ್ಪು ಎಂದು ಕಂಡು ಬಂದಲ್ಲಿ ಅದಕ್ಕೆ ಅಭ್ಯರ್ಥಿಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.

- ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ, ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಸೂಚನೆಗಳ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತುಕ್ರಮಕ್ಕೆ ಒಳ ಪಡುವುದಲ್ಲದೇ ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

NOTE :

- PAYMENT SHOULD BE MADE IN HDFC BANK OR POST OFFICE ONLY.
- IF THE CANDIDATE WANTS TO APPLY MORE THAN ONE SECTION, CANDIDATE SHOULD SELECT ACCORDING TO PRIORITY.
- MUST HAVE NOT LESS THAN TWO YEARS RESEARCH EXPERIENCE AS A RESEARCH SCHOLAR IN ANY RESEARCH INSTITUTION RECOGNIZED BY THE GOVERNMENT.

ಟಿಪ್ಪಣಿ :

- ಅರ್ಜಿಯ ಶುಲ್ಕವನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಲ್ಲಿ ಅಥವಾ ಅಂಚೆ ಕಛೇರಿಯಲ್ಲಿ ಪಾವತಿಸತಕ್ಕದ್ದು.
- ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ವಿಭಾಗಕ್ಕೆ ಆಯ್ಕೆ ಬಯಸಿದ್ದಲ್ಲಿ ಆದ್ಯತೆಯನುಸಾರ ಆಯ್ಕೆ ಮಾಡತಕ್ಕದ್ದು.
- ಸರ್ಕಾರದಿಂದ ಅಂಗೀಕೃತವಾಗಿರುವ ಯಾವುದಾದರೂ ರೀಸರ್ಚ್ ಸಂಸ್ಥೆಯಲ್ಲಿ ರೀಸರ್ಚ್ ಸ್ಕಾಲರ್ ಆಗಿ 2 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಅನುಭವವನ್ನು ಹೊಂದಿರಬೇಕು